
# 21. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊನ್ನೇಸರ



ಜಗತ್ಪ್ರಸಿದ್ದ ಜಲಪಾತವಾದ ಜೋಗದ ಸಿರಿ ಬೆಳಕಿನಲ್ಲಿ ಮಿಂದು, ನಿತ್ಯ ಹಸಿರು ಸೀರೆಯನ್ನುಟ್ಟು ಕಂಗೊಳಿಸುತ್ತಿರುವ ಮಲೆನಾಡಿನ ಸೊಬಗಿನರಮನೆ ನಮ್ಮೀ ಸಾಗರ ನಾಡು. ಈ ನಾಡಿನ ಒಂದು ತಪ್ಪಲಿನಲ್ಲಿ ಸಹ್ಯಾದ್ರಿಯ ಮಡಿಲಿನಲ್ಲಿ ಮೈದಳೆದು ಶೋಭಿಸುತ್ತಿರುವ ಪುಟ್ಟ ಗ್ರಾಮ ಹೊನ್ನೇಸರ. ಕಲೆಯ ಕಂಪನ್ನು ನಾಡಿನಾದ್ಯಂತ ಪಸರಿಸುತ್ತಿರುವ ನೀನಾಸಂ ನಾಟಕ ಶಾಲೆ ಗಾಂಧೀಜಿಯವರ ಕನಸಿನ ಚರಕ ಗ್ರಾಮಗಳು ಅಕ್ಕಪಕ್ಕಗಳಲ್ಲಿದ್ದು ಊರಿನ ಸೊಬಗನ್ನು ಇಮ್ಮಡಿಗೊಳಿಸಿದೆ. ಇಂತಹ ಸುಂದರ ಗ್ರಾಮದಲ್ಲಿ ಪುಟ್ಟಪುಟಾಣಿಗಳ ಕನಸುಗಳನ್ನು ಹೊದ್ದು ನಿಂತಿರುವುದೇ ನಮ್ಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ.

ಸುಮಾರು 87 ವರ್ಷಗಳ ಇತಿಹಾಸ ಹೊಂದಿರುವ ಈ ಶಾಲೆಯಲ್ಲಿ ವಿದ್ಯಾರ್ಜನೆ ಗಳಿಸಿದ ಅದೆಷ್ಟೋ ಜನರು ಇಂದು ನಾಡಿನಾದ್ಯಂತ ಉನ್ನತ ಹುದ್ದೆಗಳನ್ನಲಂಕರಿಸಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ ಸಾವಿರಾರು ಕಂದಮ್ಮಗಳು ಭವಿಷ್ಯ ರೂಪಿಸಿಕೊಟ್ಟಿರುವ ಈ ಶಾಲೆಗೆ ಸದಾ ಬೆನ್ನೆಲುಬಾಗಿ ನಿಂತು ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಹೆಗಲು ಕೊಟ್ಟಿರುವ ಆಧಾರ ಸ್ತಂಭ ವೆಂದರೆ **ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ** ಈ ಸಮಿತಿಯ ಈ ವರೆಗಿನ ಪ್ರಯತ್ನದ ಫಲಶ್ರುತಿಗಳನ್ನು ತಮ್ಮೆದುರಿಗಿಡಲು ನಿಜಕ್ಕೂ ಸಂತೋಷವೆನಿಸುತ್ತದೆ.

**ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಪ್ರಯತ್ನದ ಈ ವರೆಗಿನ ಫಲಶ್ರುತಿಗಳು ಈ ಕೆಳಗಿನಂತಿವೆ.**



## ಶಾಲೆಯ ಭೌತಿಕ ಪ್ರಗತಿಗಳು

ಶಾಲೆಗೆ ಅಗತ್ಯವಿರುವ ಭೌತಿಕ ಪ್ರಗತಿಗಳನ್ನು ಪೂರೈಸಿದಲ್ಲಿ ಮಾತ್ರ ಉತ್ತಮ ಕಲಿಕೆಯ ವಾತಾವರಣ ಕಲ್ಪಿಸಿಕೊಡಲು ಸಾಧ್ಯ ಎಂಬುದನ್ನು ಮನಗಂಡ ಎಸ್.ಡಿ.ಎಂ.ಸಿ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ.

ಶಾಲೆಗೆ ಡೆಸ್ಕಗಳನ್ನು ಮಾಡಿಸುವ ಸಲುವಾಗಿ ಇಲಾಖೆಯಿಂದ 30000/–ರೂಗಳ ಅನುದಾನ ಬಂದಿರುತ್ತದೆ. ಇದರ ಜೊತೆಗೆ ಎಸ್.ಡಿ.ಎಂ.ಸಿ ಯವರು ಸಾರ್ವಜನಿಕರಿಂದ 60000/–ರೂಗಳನ್ನು ಸಂಗ್ರಹಿಸಿರುತ್ತಾರೆ.ಈ ವರೆಗೆ 35 ಡೆಸ್ಕಗಳನ್ನು ಮಾಡಿಸಿದ್ದು ಬೆಂಚುಗಳನ್ನು ಮಾಡಿಸುತ್ತಿದ್ದಾರೆ. ಶಾಲೆಯ ಎಲ್ಲಾ ಮಕ್ಕಳಿಗೆ ಡೆಸ್ಕಗಳನ್ನು ಮಾಡಿಸುವ ಯೋಜನೆ ಹೊಂದಿದ್ದಾರೆ.



ಶಾಲೆಗೆ ಶೌಚಾಲಯ ನಿರ್ಮಾಣಕ್ಕಾಗಿ ಇಲಾಖೆಯಿಂದ 20.000/– ರೂಗಳು ಬಂದಿರುತ್ತದೆ. ಇದರೊಂದಿಗೆ ದಾನಿಗಳಿಂದ 40.000/–ರೂಗಳನ್ನು ಸಂಗ್ರಹಿಸಿ ಸುಮಾರು 60.000/–ರೂಗಳ ವೆಚ್ಚದಲ್ಲಿ ಸುಸಜ್ಜಿತವಾದ ಶೌಚಾಲಯ ನಿರ್ಮಿಸಿ ಕೊಟ್ಟಿರುತ್ತಾರೆ.

- **ಅಲ್ಮೆರಾಗಳು :ತಗುಲಿದ ವೆಚ್ಚ** :10.000/–ರೂಗಳು ದಾನಿಗಳಿಂದ ಸಂಗ್ರಹಿಸಿದ ಹಣದಿಂದ ಸುಮಾರು 10.000/–ರೂಗಳ ವೆಚ್ಚದಲ್ಲಿ ಶಿಕ್ಷಕರಿಗಾಗಿ ಪ್ರತ್ಯೇಕ ಕಂಪಾರ್ಟ್‌ಮೆಂಟ್ ಗಳಿರುವ ಒಂದು ಅಲ್ಮೆರಾ ಹಾಗೂ ಗ್ರಂಥಾಲಯದ ಪುಸ್ತಕಗಳನ್ನಿಡಲು ಒಂದು ಅಲ್ಮೆರಾ ಮಾಡಿಸಿಕೊಟ್ಟಿರುತ್ತಾರೆ.
- **ಮಕ್ಕಳಿಗಾಗಿ ಊಟದ ತಟ್ಟೆಗಳು ಹಾಗೂ ಲೋಟಗಳು: ತಗುಲಿದ ವೆಚ್ಚ : 15.000/–ರೂ**

ದಾನಿಗಳಿಂದ ಸಂಗ್ರಹಿಸಿದ ಸುಮಾರು 15.000/–ರೂಗಳಿಂದ ಶಾಲೆಯ ಮಕ್ಕಳ ಊಟದ ವ್ಯವಸ್ಥೆಗಾಗಿ 200 ಊಟದ ತಟ್ಟೆಗಳು ,200 ಲೋಟಗಳು ಹಾಗೂ ತಟ್ಟೆ ಲೋಟಗಳನ್ನಿಡಲು ಕಬ್ಬಿಣದ ಸ್ಟಾಂಡ್ ಮಾಡಿಸಿಕೊಟ್ಟಿರುತ್ತಾರೆ.



**ಆಟದ ಮೈದಾನ ಸಮತಟ್ಟು : ತಗುಲಿದ ವೆಚ್ಚ :** 15.000/ರೂಗಳುಸುಮಾರು 15000/–ರೂಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಶಾಲೆಯ ಆಟದ ಮೈದಾನವನ್ನು ಸಮತಟ್ಟು ಮಾಡಿಸಿಕೊಟ್ಟು ಮಕ್ಕಳು ಆಟವಾಡಲು ಅನುಕೂಲವಾಗಿರುತ್ತದೆ. ಮಕ್ಕಳು ಆಟದ ಮೈದಾನಕ್ಕೆ ಹೋಗಲು ಸರಿಯಾದ ರಸ್ತೆಯ ವ್ಯವಸ್ಥೆ ಇರಲಿಲ್ಲ ಸುಮಾರು 15000/–ರೂಗಳನ್ನು ದಾನಿಗಳಿಂದ ಸಂಗ್ರಹಿಸಿ ಆಟದ ಮೈದಾನಕ್ಕೆ ರಸ್ತೆಯ ವ್ಯವಸ್ಥೆ ಮಾಡಲಾಗಿದೆ.

- **ಆಟದ ಮೈದಾನಕ್ಕೆ ರ್‍ಯಾಂಪ್ ಸೌಲಭ್ಯ ತಗುಲಿದ ವೆಚ್ಚ : 250000/–ರೂ**

ಸ್ಥಳೀಯ ಗ್ರಾಮ ಪಂಚಾಯಿತಿ ಸಹಕಾರದಿಂದ ಸುಮಾರು 250000ರೂಗಳ ವೆಚ್ಚದಲ್ಲಿ ಮಕ್ಕಳಿಗಾಗಿ ಆಟದ ಮೈದಾನಕ್ಕೆ ಇಳಿಯಲು ಸುಸಜ್ಜಿತ ರ್‍ಯಾಂಪ್ ಸೌಲಭ್ಯ ಮಾಡಿಕೊಳ್ಳಲಾಗಿದೆ.



- **ಆಟಕ್ಕಾಗಿ ಜಾರುಬಂಡಿ : ತಗುಲಿದ ವೆಚ್ಚ :35000/–ರೂಗಳು**

ಚಿಕ್ಕ ಮಕ್ಕಳು ಆಟವಾಡಲು ಅನುಕೂಲವಾಗುವಂತೆ ದಾನಿಗಳಿಂದ ಸುಮಾರು 35000/–ರೂಗಳನ್ನು ಸಂಗ್ರಹಿಸಿ ಆಟದ ಮೈದಾನದಲ್ಲಿ ಜಾರುಬಂಡಿ ಹಾಗೂ ಇತರ ಸಲಕರಣಿಗಳನ್ನು ಅಳವಡಿಸಿಕೊಟ್ಟಿರುತ್ತಾರೆ.



- **ಕ್ರೀಡಾ ಸಾಮಗ್ರಿಗಳು** : ದಾನಿಗಳ ನೆರವಿನಿಂದ ಆಟಕ್ಕಾಗಿ 12000/–ರೂಗಳ ಕ್ರೀಡಾ ಸಾಮಗ್ರಿಗಳನ್ನು ಕೊಡಿಸಿರುತ್ತಾರೆ
- **ನಲ್ಲಿಗಳ ವ್ಯವಸ್ಥೆ ತಗುಲಿದ ವೆಚ್ಚ : 8000/– ರೂ** ಮಕ್ಕಳಿಗೆ ಕುಡಿಯುವ ನೀರಿಗಾಗಿ ಹಾಗೂ ತಟ್ಟೆ ತೊಳೆಯಲು ಸುಮಾರು 5000/–ರೂ ವೆಚ್ಚದಲ್ಲಿ ಸಾಲು ನಲ್ಲಿಗಳ ವ್ಯವಸ್ಥೆ ಮಾಡಿಸಿಕೊಟ್ಟಿರುತ್ತಾರೆ. ಹಾಗೂ ನೀರು ಸಂಗ್ರಹಣೆಗಾಗಿ 3000/–ರೂ ಗಳ ವೆಚ್ಚದಲ್ಲಿ 3 ಟ್ಯಾಂಕ್ಗಳನ್ನು ನಿರ್ಮಿಸಿಕೊಟ್ಟಿರುತ್ತಾರೆ.



- **ಮೈಕ್ ವ್ಯವಸ್ಥೆ : ತಗುಲಿದ ವೆಚ್ಚ :30000/–ರೂ** ಶಾಲಾ ಸಾಂಸ್ಕ್ರತಿಕ ಚಟುವಟಿಕೆಗಾಗಿ ದಾನಿಗಳ ನೆರವಿನಿಂದ ಮೈಕ್ ವ್ಯವಸ್ಥೆ ಕಲ್ಪಿಸಿಕೊಟ್ಟಿರುತ್ತಾರೆ.
- **ಊಟಕ್ಕೆ ಉಪ್ಪಿನಕಾಯಿ, ಅಡಿಗೆಗೆ ತೆಂಗಿನಕಾಯಿ** : ದಾನಿಗಳ ನೆರವಿನಿಂದ ಪ್ರತಿದಿನ ಅಡಿಗೆಗೆ ಬೇಕಾಗುವಷ್ಟು ತೆಂಗಿನಕಾಯಿ ಹಾಗೂ ಪ್ರತಿದಿನ ಊಟಕ್ಕೆ ಉಪ್ಪಿನಕಾಯಿಯನ್ನು ನೀಡುತ್ತಿದ್ದಾರೆ ಮತ್ತು ವಾರಕ್ಕೆರಡು ದಿನ ಮಜ್ಜಿಗೆಯ ವ್ಯವಸ್ಥೆ ಮಾಡುತ್ತಿದ್ದಾರೆ.



## ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಎಸ್.ಡಿ.ಎಂ.ಸಿ ಯವರ ಪ್ರಯತ್ನಗಳು

ಶಾಲೆಯ ಎಸ್.ಡಿ.ಎಂ.ಸಿ ಯು ಕೇವಲ ಭೌತಿಕ ಪ್ರಗತಿಗಳನ್ನತ್ತ ಮಾತ್ರ ಗಮನ ಹರಿಸದೆ ಶೈಕ್ಷಣಿಕ ಪ್ರಗತಿಗಳ ಕಡೆಯೂ ಸಹ ಹೆಚ್ಚಿನ ಕಾಳಜಿ ವಹಿಸುತ್ತಿದೆ.ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಮಾಡುತ್ತಿರುವ ಎಸ್.ಡಿ.ಎಂ.ಸಿ ಯವರ ಪ್ರಯತ್ನಗಳು ಈ ಕೆಳಗಿನಂತಿವೆ.

- **ನೋಟ್ ಬುಕ್ ವಿತರಣೆ :** ಶಾಲೆಗೆ ಬರುತ್ತಿರುವ ಎಲ್ಲಾ ಬಡ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹಾವಾಡಿಗರ ಮಕ್ಕಳಿಗೆ ಪ್ರತಿ ವರ್ಷವೂ ,ವರ್ಷಕ್ಕೆ ಬೇಕಾಗುವಷ್ಟು ನೋಟ್ ಬುಕ್‌ಗಳನ್ನು ದಾನಿಗಳ ಸಹಕಾರದಿಂದ ನೀಡುತ್ತಿದೆ.
- **ಪ್ರತಿಭಾ ಪುರಸ್ಕಾರ :** ಶಾಲೆಯಲ್ಲಿ ಕಲಿಯುತ್ತಿರುವ ಪ್ರತಿಭಾವಂತ ಮಕ್ಕಳಿಗೆ ದಾನಿಗಳ ಸಹಕಾರದಿಂದ ಪ್ರತಿಭಾ ಪುರಸ್ಕಾರ ನೀಡುತ್ತಾ ಬಂದಿದೆ.





- ಗ್ರಂಥಾಲಯಕ್ಕೆ ಸಾರ್ವಜನಿಕರಿಂದ ಪುಸ್ತಕಗಳನ್ನು ಸಂಗ್ರಹಿಸಿ ಕೊಡುತ್ತಿದೆ.
- **ಶಾಲಾ ವಾರ್ಷಿಕೋತ್ಸವ** : ಪೋಷಕರ ಮನೆಗಳಿಗೆ ತೆರಳಿ ವಂತಿಗೆ ಸಂಗ್ರಹಿಸುವ ಮೂಲಕ ಪ್ರತಿವರ್ಷವೂ ವಾರ್ಷಿಕೋತ್ಸವದ ಅಂಗವಾಗಿ ಸ್ಪೋರ್ಟ್ಸ್ ಹಾಗೂ ಸಾಂಸ್ಕೃತಿಕ ಸ್ಪರ್ದೆಗಳನ್ನು ನಡೆಸಿ ಸ್ಪರ್ಧೆಗಳನ್ನು ನಡೆಸಿ ಸ್ಪರ್ದೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ನೀಡುತ್ತಾ ಬಂದಿದೆ
- **ಶಾಲಾ ಶೈಕ್ಷಣಿಕ ಪ್ರವಾಸ:** ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಪೂರ್ಣ ಸಹಕಾರ ನೀಡುವುದರೊಂದಿಗೆ ಪೋಷಕರ ಮನವೊಲಿಸಿ ಮಕ್ಕಳನ್ನು ಅಣಿಗೊಳಿಸುವುದರ ಮೂಲಕ ಪ್ರತೀವರ್ಷವೂ ಶಾಲಾ ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದೆ.
- **ಹಸಿರೀಕರಣ** : ಶಾಲೆಗೆ ಉತ್ತಮ ಪರಿಸರವನ್ನು ಒದಗಿಸಿಕೊಡುವ ದೃಷ್ಟಿಯಿಂದ ಪ್ರತಿವರ್ಷ ಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿ ಶಾಲೆಯ ಹಿಂಭಾಗದ ಖಾಲಿ ಜಾಗದಲ್ಲಿ ಸುಮಾರು ಒಂದು ಸಾವಿರ ಗಿಡಗಳನ್ನು ನೆಡುವ ಗುರಿಯನ್ನು ಈ ವರ್ಷ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಗ್ರಾಮಪಂಚಾಯ್ತಿಗೆ ಮನವಿ ಸಲ್ಲಿಸಿದ್ದು,ಹಸಿರೀಕರಣ ಯೋಜನೆಯಡಿಯಲ್ಲಿ ಶಾಲೆಗೆ ಗಿಡಗಳನ್ನು ಪೂರೈಸುವ ಭರವಸೆ ನೀಡಿರುತ್ತಾರೆ .ಇದರ ಜೊತೆಯಲ್ಲಿ ಒಂದು ಭಾಗದಲ್ಲಿ ಔಷಧಿ ಸಸ್ಯಗಳನ್ನು ಬೆಳೆಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.
- **ಶಾಲೆಗೊಂದು ಕಾಂಪೌಂಡ್** : ಶಾಲೆಯ ಸುತ್ತಲೂ ತಂತಿ ಬೇಲಿಯ ವ್ಯವಸ್ಥೆ ಇದ್ದು ಶಾಲೆಗೊಂದು ಉತ್ತಮವಾದ ಕಾಂಪೌಂಡ್ ನಿರ್ಮಾಣದ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಸಂಬಂಧ ಜನಪ್ರತಿನಿದಿಗಳಿಗೆ ಮನವಿ ಸಲ್ಲಿಸಿದ್ದು ಎನ್.ಆರ್.ಇ.ಜಿ. ಯೋಜನೆಯಡಿಯಲ್ಲಿ ಕಾಂಪೌಂಡ್ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿರುತ್ತಾರೆ.
- **ಸಹಪಠ್ಯ ಚಟುವಟಿಕೆಗಳು** : ಸಾರ್ವಜನಿಕರ ಸಹಕಾರದಿಂದ ಸ್ಥಳೀಯ ಬ್ಯಾಂಕಿನಲ್ಲಿ ನಿಗದಿತ ಮೊತ್ತದ ಠೇವಣಿಯನ್ನಿರಿಸಿ, ಈ ಠೇವಣಿಯಿಂದ ಬರುವ ಬಡ್ಡಿ ಹಣದಿಂದ ಶಾಲೆಯಲ್ಲಿ ವರ್ಷವಿಡೀ ಸಹಪಠ್ಯ ಚಟುವಟಿಕೆಗಳಿಗೆ ಪೂರಕವಾದ ಕಾರ್ಯಕ್ರಮಗಳು ನಡೆಯುವಂತೆ ನೋಡಿಕೊಳ್ಳುತ್ತಿದೆ.
- **ಡ್ರಾಪ್ ಔಟ್ ರಹಿತ ಶಾಲೆ** :ದೀರ್ಘ ಕಾಲ ಗೈರುಹಾಜರಾಗುವ ಮಕ್ಕಳ ಮನೆಗಳಿಗೆ ತೆರಳಿ ಪೋಷಕರ ಸೂಕ್ತ ತಿಳುವಳಿಕೆ ನೀಡಿ ಮಕ್ಕಳನ್ನು ಶಾಲೆಗೆ ಕಳಿಸುವಂತೆ ಮಾಡಿ ಡ್ರಾಪ್ ಔಟ್ ರಹಿತ ಶಾಲೆಯನ್ನಾಗಿರುವಂತೆ ನೋಡಿಕೊಂಡಿದೆ .
- **ಪೋಷಕರ ಮನೆಗಳಿಗೆ ಭೇಟಿ** : ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪೋಷಕರ ಮನೆಗಳಿಗೆ ತೆರಳಿ ಅವರೊಂದಿಗೆ ಚರ್ಚಿಸಿ ಈ ಕುರಿತು ಪರಿಹಾರ ಕಂಡುಕೊಳ್ಳುವತ್ತ ನಿರಂತರ ಶ್ರಮ ವಹಿಸುತ್ತದೆ.
- **ಶಾಲಾ ಭೇಟಿ** : ಪ್ರತಿದಿನ ಎಸ್.ಡಿ.ಎಂ.ಸಿ ಯ ಯಾರಾದರೊಬ್ಬ ಸದಸ್ಯರು ಶಾಲೆಗೆ ಭೇಟಿ ನೀಡುವ ಮೂಲಕ ಶಿಕ್ಷಕರೊಂದಿಗೆ ಶಾಲೆಯ ಕುಂದು-ಕೊರತೆಗಳ ಬಗ್ಗೆ ಚರ್ಚಿಸಿ ಪರಿಹಾರ ದೊರಕಿಸಲು ಪ್ರಯತ್ನ ನಡೆಸುತ್ತಾರೆ .

- **ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚೆ** : ತಿಂಗಳಿಗೊಮ್ಮೆ ಎಸ್‌ಡಿಎಮ್‌ಸಿ ಸಭೆ ಸೇರುವ ಮೂಲಕ ಕಡ್ಡಾಯವಾಗಿ ಶಾಲೆಯ ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚೆ ನಡೆಸುತ್ತದೆ ಹಾಗೂ ಎಸ್.ಡಿ.ಎಂ.ಸಿ ಯ ಬಹುಪಾಲು ಸದಸ್ಯರು ಎಲ್ಲಾ ಸಭೆಗಳಿಗೂ ಹಾಜರಾಗುತ್ತಾರೆ.
- **ಭಾಂದವ್ಯ** : ಶಾಲಾ ಎಸ್.ಡಿ.ಎಮ್.ಸಿ, ಶಿಕ್ಷಕರ ,ಮತ್ತು ಪರಸ್ಪರ ಸದಸ್ಯರುಗಳ ನಡುವೆ ಉತ್ತಮ ಭಾಂದವ್ಯವಿರಿಸಿಕೊಂಡಿದ್ದು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುತ್ತಿದ್ದಾರೆ .
- **ಗುರಿ ಸಾಧನೆಗಳು : ಶುಚಿ–ರುಚಿಯಾದ ಅಡುಗೆಗಾಗಿ ಶಾಲೆಗೆ ಬಾಯ್ಲರ್ ಸೌಲಭ್ಯ**



ಅಕ್ಷರದಾಸೋಹದಡಿಯಲ್ಲಿ ಮಕ್ಕಳಿಗೆ ಶುಚಿ ರುಚಿಯಾದ ಅಡುಗೆ ತಯಾರಿಕೆಗಾಗಿ ದಾನಿಗಳ ಸಹಕಾರದಿಂದ 1.45 ಲಕ್ಷ ರೂ ಗಳ ವೆಚ್ಚದಲ್ಲಿ ಅತ್ಯುತ್ತಮವಾದ ಬಾಯ್ಲರ್‌ರನ್ನು ಅಳವಡಿಸಲಾಗಿದೆ.

- **ಕಾಂಪೌಂಡ್ ನಿರ್ಮಾಣ** : ಶಾಲೆಗೊಂದು ಕಾಂಪೌಂಡ್ ನ ಅವಶ್ಯಕತೆಯನ್ನು ಮನಗಂಡು ಎನ್ ಆರ್ ಇ ಜಿ ಯೋಜನೆಯಡಿಯಲ್ಲಿ ಶಾಲಾ ಮುಂಭಾಗದಲ್ಲಿ ಉತ್ತಮವಾದ ಕಾಂಪೌಂಡ್‌ನ್ನು ನಿರ್ಮಿಸಿಕೊಳ್ಳಲಾಗಿದೆ.



- **ಕಲಿಕೋಪಕರಣಗಳ ತಯಾರಿಕೆ ಮತ್ತು ಪ್ರದರ್ಶನ** : ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಕಲಿಕೆಗೆ ಪೂರಕವಾದ ಕಲಿಕೋಪಕರಣಗಳನ್ನು ನಿರ್ಮಿಸಿ ಅದನ್ನು ನಿತ್ಯದ ಭೋಧನೆಯಲ್ಲಿ ಬಳಸಿಕೊಳ್ಳುವುದರ ಜೊತೆಗೆ ಪ್ರತೀವರ್ಷ ಪೋಷಕರಿಗಾಗಿ ಕಲಿಕೋಪಕರಣಗಳ ಪ್ರದರ್ಶನ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.
- **ಶಾಲಾ ಮುಂಭಾಗದಲ್ಲಿ ಧ್ವಜಸ್ಥಂಭ**




**ರಾಷ್ಟ್ರೀಯ ಸಮಾರಂಭಗಳಿಗೆ ಅನುಕೂಲವಾಗುವಂತೆ ಧ್ವಜಸ್ಥಂಭದ ಅಗತ್ಯತೆಯನ್ನು ಮನಗಂಡು ದಾನಿಗಳ ಸಹಕಾರದಿಂದ 20000ರೂಗಳ ವೆಚ್ಚದಲ್ಲಿ ಉತ್ತಮವಾದ ಧ್ವಜಸ್ಥಂಭವನ್ನು ನಿರ್ಮಾಣಮಾಡಲಾಗಿದೆ.**

## ದಾನಿಗಳಿಂದ ಸಂಗ್ರಹಿಸಿದ ದಾನಗಳ ವಿವರ

| ಕ್ರ ಸಂ | ಒದಗಿಸಿದ ಸೌಲಭ್ಯಗಳ ವಿವರ | ಸಂಗ್ರಹಿಸಿದ ದಾನದ ಮೊತ್ತ |
|---|---|---|
| 1 | ಬಿಸಿಯೂಟದ ತಯಾರಿಕೆಗಾಗಿ ಬಾಯ್ಲರ್ | 1,45,000 |
| 2 | 200 ಊಟದ ತಟ್ಟೆಗಳು | 15000 |
| 3 | ಕಳೆದ 6 ವರ್ಷಗಳಿಂದ ಪ್ರತಿದಿನದ ಬಿಸಿಯೂಟಕ್ಕೆ ಉಪ್ಪಿನಕಾಯಿ | 180000 |
| 4 | ಊಟದ ತಟ್ಟೆಗಳನ್ನು ಜೋಡಿಸಲು ಕಬ್ಬಿಣದ ಸ್ಟ್ಯಾಂಡ್ | 10,000 |
| 5 | ಶೌಚಾಲಯ ನಿರ್ಮಾಣ | 40,000 |
| 6 | ಅಲ್ಮೆರಾಗಳು | 30,000 |
| 7 | ಎಲ್ಲಾ ಮಕ್ಕಳಿಗೆ ಬೆಂಚುಗಳು ಹಾಗೂ ಡೆಸ್ಕುಗಳು | 60,000 |
| 8 | ಶುದ್ಧ ಕುಡಿಯುವ ನೀರಿಗಾಗಿ ಅಕ್ವಾಗಾರ್ಡ್ | 10,000 |
| 9 | ಶುದ್ಧೀಕರಿಸಿದ ಕುಡಿಯುವ ನೀರಿನ ಸಂಗ್ರಹಣೆಗಾಗಿ ಸ್ಟೀಲ್ ಟ್ಯಾಂಕ್ | 10,000 |
| 10 | ಶಾಲಾ ಮುಂಭಾಗದ ಕಮಾನು ದ್ವಾರ | 15,000 |
| 11 | ಅಶೋಕ ಸ್ಥೂಪ ಹೊಂದಿದ ಧ್ವಜಸ್ಥಂಭ | 20,000 |
| 12 | ಉದ್ಯಾನವನದಲ್ಲಿ ಪ್ರಾಣಿಗಳ ಪ್ರತಿಮೆಗಳು | 25000 |
| 13 | ಸಭಾಭವನ ವಿಸ್ತರಣೆ | 50,000 |

| | | |
|---|---|---|
| **14** | ಕಾರ್ಯಕ್ರಮಗಳಿಗಾಗಿ 100 ಕುರ್ಚಿಗಳು | 25,000 |
| **15** | ಆಟದ ಮೀದಾನದ ಸಮತಟ್ಟು | 15,000 |
| **16** | ಹೂದೋಟಕ್ಕಾಗಿ ಹೂವಿನ ಕುಂಡಗಳು | 5,000 |
| **17** | ಆಟೋಪಕರಣಗಳು | 12,000 |
| **18** | ಖಾಯಂ ಠೇವಣಿ ನಿಧಿ | 65,000 |
| **19** | ಕಂಪ್ಯೂಟರ್ 5 | 200000 |
| **20** | ಲ್ಯಾಪ್ ಟಾಪ್ | 40000 |
| **21** | ಯು ಪಿ ಎಸ್ | 25000 |
| **22** | ಪ್ರಾಜೆಕ್ಟರ್,ವೈಟ್ ಬೋರ್ಡ್,ಸಿ ಪಿ ಯು ಇತರೆ | 130000 |
| **23** | ಕೈ ತೊಳೆಯಲು ಸ್ಟೀಲ್ ನಲ್ಲಿ ಸ್ಟ್ಯಾಂಡ್ | 20000 |
| **24** | ಖಾಸಗಿಯಾಗಿ ಕಂಪ್ಯೂಟರ್ ಶಿಕ್ಷಕರ ನೇಮಕ(ವೇತನಕ್ಕಾಗಿ) | 190000(ಕಳೆದ ನಾಲ್ಕು ವರ್ಷಗಳಿಂದ) |
| **25** | ಟಿ.ವಿ,ಪ್ರಾಜೆಕ್ಟರ್,ಡಿವಿಡಿ ಪ್ಲೇಯರ್ ಹಾಗೂ ಸ್ಪೀಕರ್ | 185000 |
| **26** | ಇಂಗ್ಲೀಷ್ ಮೀಡಿಯಮ್ ತರಗತಿಗೆ ಖಾಸಗಿ ಶಿಕ್ಷಕರ ನೇಮಕ (ವೇತನಕ್ಕಾಗಿ) | 330000(ಕಳೆದ ನಾಲ್ಕು ವರ್ಷಗಳಿಂದ) |
| **27** | 48 ಚದರ ಅಡಿ ವಿಸ್ತೀರ್ಣದ ಸ್ಕ್ರೀನ್ | 12000 |
| **28** | ಕಸ ಸಂಗ್ರಹಣೆಗಾಗಿ ಡಸ್ಟ್ ಬಿನ್ | 11000 |
| **29** | ಜ್ಞಾನ ಪೀಠ ಪ್ರಶಸ್ತಿ ವಿಜೇತರ ಫೋಟೋಗಳು ಹಾಗೂ ಪ್ರಾಣಿ ಪ್ರತಿಮೆಗಳು | 10000 |
| **30** | ಟೋಪೋಗ್ರಫಿಯಲ್ಲಿ ಭಾರತ ನಕ್ಷೆ | 5000 |
| **31** | ಶಾಲಾಮುಂಭಾಗದಲ್ಲಿ ಸರಸ್ವತಿ ವಿಗ್ರಹ | 50000 |
| **32** | ಎಂಪ್ಲಿಫಯರ್ ,ಮೌತ್‌ಪೀಸ್,ಸ್ಪೀಕರ್ | 30000 |
| **33** | ಶಾಲಾ ಕೈತೋಟಕ್ಕೆ ಟೈಲ್ಸ್ ಅಳವಡಿಕೆ | 45000 |
| **34** | ಜಾರುಬಂಡಿ | 35000 |
| **35** | ಕೈ ತೊಳೆಯಲು ನಲ್ಲಿಗಳು | 8000 |
| **36** | ಆಟದ ಮೈದಾನಕ್ಕೆ ಇಳಿಯಲು ರ್‍ಯಾಂಪ್ ಸೌಲಭ್ಯ | 250000 |
| | **ಒಟ್ಟು ಸಂಗ್ರಹಿಸಿದ ಮೊತ್ತ** | 2308000 |

ಶೌಚಾಲಯ ವ್ಯವಸ್ಥೆ :



ಎಲ್ಲಾ ಮಕ್ಕಳಿಗೆ ಬೆಂಚುಗಳು ಹಾಗೂ ಡೆಸ್ಕುಗಳು :



ಶುದ್ಧೀಕರಿಸಿದ ಕುಡಿಯುವ ನೀರಿನ ಸಂಗ್ರಹಣೆಗಾಗಿ ಸ್ಟೀಲ್ ಟ್ಯಾಂಕ್ :






ಶಾಲಾ ಮುಂಭಾಗದ ಕಮಾನು ದ್ವಾರ :





ಶಾಲಾಮುಂಭಾಗದಲ್ಲಿ ಸರಸ್ವತಿ ವಿಗ್ರಹ :



ಪ್ರಾಜೆಕ್ಟರ್,ವೈಟ್ ಬೋರ್ಡ್, ಸಿ ಪಿ ಯು ಇತರೆ :

- **ಉತ್ತಮ ಸಭಾಭವನ** : ವರ್ಷವಿಡೀ ಶಾಲೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಿಗಾಗಿ ಸಭಾ ಭವನದ ಅವಶ್ಯಕತೆಯನ್ನು ಮನಗಂಡು ಜಿಲ್ಲಾ ಪಂಚಾಯಿತಿಯ 1 ಲಕ್ಷ ರೂ ಅನುದಾನದೊಂದಿಗೆ ಸ್ಥಳೀಯ ದಾನಿಗಳಿಂದ 35ಸಾವಿರ ರೂಗಳನ್ನು ಸಂಗ್ರಹಿಸಿ ಉತ್ತಮವಾದ ಸಭಾ ಭವನವನ್ನು ನಿರ್ಮಿಸಿಕೊಳ್ಳಲಾಗಿದೆ.
- **ಸಮಾರಂಭಗಳಿಗಾಗಿ ಆಸನ ವ್ಯವಸ್ಥೆ** : ಶಾಲೆಯಲ್ಲಿ ಹಮ್ಮಿಕೊಳ್ಳಲಾಗುವ ವಿವಿಧ ಕಾರ್ಯಕ್ರಮಗಳಿಗೆ ಆಗಮಿಸುವ ಪೋಷಕರು ಕುಳಿತುಕೊಳ್ಳಲು ಅನುಕೂಲವಾಗುವಂತೆ ದಾನಿಗಳ ಸಹಕಾರದಿಂದ ಸುಮಾರು 30 ಸಾವಿರ ರೂ ಗಳ ವೆಚ್ಚದಲ್ಲಿ 100 ಉತ್ತಮ ಕುರ್ಚಿಗಳ ಸೌಲಭ್ಯಗಳನ್ನು ಒದಗಿಸಿಕೊಳ್ಳಲಾಗಿದೆ.
- **ಇಲಾಖಾಧಿಕಾರಿಗಳ ಭೇಟಿ :** ಶಾಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಪ್ರಗತಿಪರಿಶೀಲನೆಗಾಗಿ ಇಲಾಖೆಯ ಹಿರಿಯ ಅಧಿಕಾರಿಗಳು ಶಾಲೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದು,ಶಾಲೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

.



- **ವಿದೇಶಿಯರ ಭೇಟಿ** : ಶಾಲೆಯ ನಿರಂತರ ಪ್ರಗತಿಯನ್ನು ಗಮನದಲ್ಲಿರಿಸಿಕೊಂಡು ಶಾಲೆಯಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಶೈಕ್ಷಣಿಕ ಹಾಗೂ ಭೌತಿಕ ಪ್ರಗತಿಗಳ ಕುರುತಾದ ಅಧ್ಯಯನಕ್ಕಾಗಿ ವಿದೇಶಿ ಪ್ರತಿನಿಧಿಗಳು ಶಾಲೆಗೆ ಆಗಮಿಸಿ,ಶಾಲೆಯ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.

ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ಪ್ರಗತಿಗಾಗಿ ಇನ್ನೂ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿರುತ್ತಿದ್ದು,ಈ ಯೋಜನೆಗಳ ಅನುಷ್ಠಾನಕ್ಕಾಗಿ ಸಂಪೂರ್ಣ ಬೆಂಬಲ ನೀಡುತ್ತಿರುವ ಶಾಲೆಯ ಎಸ್.ಡಿ.ಎಮ್.ಸಿ ಸದಸ್ಯರು ,ಇಲಾಖಾಧಿಕಾರಿಗಳು ಹಾಗೂ ಪೋಷಕ ಬಂಧುಗಳಿಗೆ ಮತ್ತೊಮ್ಮೆ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ .

**ಸಿರಿಗನ್ನಡಂ ಗೆಲ್ಗೆ**